ಓ.ಎಸ್.ನಂ.68-2019
ಡಿ.ಡಬ್ಲು-3

ದಿ: 06.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು</u>**: ವಾದಿಗಳ ಪರ ಶ್ರೀಯುತ ಎನ್.ಎಸ್ ವಕೀಲರಿಂದ.

ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ೧ನೇ ಪ್ರತಿವಾದಿ ನನಗೆ ಸಾಕ್ಷ್ಯ ನುಡಿಯಲು ಬರುವಂತೆ ಸೂಚಿಸಿದ ಮೇರೆಗೆ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ೧ನೇ ಪ್ರತಿವಾದಿ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ನಾನು ಯಲಚನಹಳ್ಳಿ ಗ್ರಾಮದಲ್ಲಿ 25 ವರ್ಷಗಳಿಂದ ವಾಸವಾಗಿರುತ್ತೇನೆ. ನಾನು ಚಾಲಕ ವೃತ್ತಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ.

2. ಪ್ರಸ್ತುತ ದಾವೆಯನ್ನು ಲಕ್ಷ್ಮಿ ದೇವಿರವರು ರಾಮಸ್ವಾಮಿರವರ ವಿರುದ್ದ ದಾಖಲಿಸಿರುತ್ತಾರೆ. ಸದರಿ ಲಕ್ಷ್ಮಿ ದೇವಿರವರು ಯಾವ ಪರಿಹಾರ ಕೋರಿ ದಾವೆಯನ್ನು ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಿ ದೇವಿರವರು ಎಷ್ಟು ವಿಸ್ತೀರ್ಣದ ಆಸ್ತಿ ಮೇಲೆ ದಾವೆ ದಾಖಲಿಸಿರುತ್ತಾರೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 29*17 ಅಡಿ ವಿಸ್ತೀರ್ಣದ ಮೇಲೆ ದಾವೆ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಲಕ್ಷ್ಮಿ ದೇವಿರವರ ಆಸ್ತಿಯ ಚಕ್ಕುಬಂದಿಗಳು ತಿಳಿದಿವೆ ಮತ್ತು ಅವುಗಳು ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಖಾನೇಷುಮಾರಿ 1 ಆಸ್ತಿ, ಉತ್ತರಕ್ಕೆ ಚೆನ್ನಬಸಪ್ಪರವರ ಜಮೀನು ಮತ್ತು ದಕ್ಷಿಣಕ್ಕೆ ಚೆನ್ನಮ್ಮ ರವರ ಜಮೀನು ಇರುತ್ತದೆ.

3. ಲಕ್ಷ್ಮಿ ದೇವಿರವರು ಮನೆ ಕಟ್ಟುವ ಸಮಯದಲ್ಲಿ ರಾಮಸ್ವಾಮಿರವರು ತೊಂದರೆ ನೀಡಿದ ಮೇರೆಗೆ ಪ್ರಸ್ತುತ ದಾವೆಯನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಲಕ್ಷ್ಮಿ ದೇವಿರವರು ಮನೆಯನ್ನು ಕಟ್ಟುತ್ತಿರಲಿಲ್ಲ. ದಾವಾ ಆಸ್ತಿಯು ಮೂಲತ: ನಂಜಪ್ಪರವರ ಆಸ್ತಿ ಎಂದರೆ ಸರಿ. ಸದರಿ ನಂಜಪ್ಪರವರ ಖರೀದಿ ಪತ್ರವನ್ನು ನೋಡಿರುತ್ತೇನೆ. ಸದರಿ ನಂಜಪ್ಪರವರು ಚಿಕ್ಕನಂಜುಂಡಪ್ಪರವರಿಂದ ಆಸ್ತಿಯನ್ನು ಖರೀದಿಸಿರುತ್ತಾರೆ. ಆ ರೀತಿ ನಂಜಪ್ಪರವರು ಯಾವ ದಿನಾಂಕದಂದು ಕ್ರಯ ಪತ್ರವನ್ನು ನೊಂದಣಿ ಮಾಡಿಸಿಕೊಂಡಿರುತ್ತಾರೆ ಎಂದು ತಿಳಿದಿದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 50-60 ವರ್ಷ ಆಗಿರುತ್ತದೆ ಮತ್ತು ನಿರ್ದಿಷ್ಟ ದಿನಾಂಕ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನಂಜಪ್ಪರವರು ದಾವಾ ಆಸ್ತಿಯನ್ನು ಖರೀದಿಸಿದ್ದರು ಎನ್ನುವ ವಿಚಾರವನ್ನು ಊರಿನಲ್ಲಿ ಹೇಳುತ್ತಿದ್ದುದ್ದನ್ನು ಕೇಳಿರುತ್ತೇನೆ. ಸದರಿ ನಂಜಪ್ಪರವರ ಕ್ರಯ ಪತ್ರವನ್ನು ಓದಿರುವುದಿಲ್ಲ ಮತ್ತು ತಿಳಿದುಕೊಂಡಿರುತ್ತೇನೆ. ಸದರಿ ದಾವಾ ಆಸ್ತಿಗೆ ಮತ್ತು ನನಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ಲಕ್ಷ್ಮಿ ದೇವಿರವರು ನನ್ನ ದೂರದ ಸಂಬಂಧಿ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನಗೆ ಸಂಬಂಧಿಸಿದ ಯಾವುದೇ ಆಸ್ತಿಗಳು ಇರುವುದಿಲ್ಲ. ಸದರಿ ನಂಜಪ್ಪರವರು ದಾವಾ ಜಮೀನನ್ನು ಖರೀದಿಸಿದ್ದರು ಎಂದು ಹೇಳುವ ಸಮಯದಲ್ಲಿ ನಾನು ಜನಿಸಿರಲಿಲ್ಲ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ ೧ ರಲ್ಲಿ ಪಶ್ಚಿಮದ ಕಡೆ ಕಾಳಪ್ಪ ಮತ್ತು ನಲ್ಲಪ್ಪ ರವರ ಜಮೀನು ಎಂದು ಕಾಣಿಸಿರುತ್ತೇನೆ ಎಂದರೆ ಸರಿ. ಸದರಿ ನಲ್ಲಪ್ಪರವರು ವಾದಿಯ ತಾತ ಎಂದರೆ ಸರಿ.

5. ನಿ.ಡಿ.18 ನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಕ್ಷಿಣ ದಿಕ್ಕಿಗೆ ಬೀರಳಪ್ಪರವರ ವಠಾರ ಎಂದು ಕಾಣಿಸಿರುತ್ತೇನೆ ಎಂದರೆ ಸರಿ. ನಿ.ಡಿ.18 ರಲ್ಲಿ ದಕ್ಷಿಣ ದಿಕ್ಕಿನಲ್ಲಿ ಬೀರಳಪ್ಪರವರ ವಠಾರ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ಸದರಿ ಬೀರಳಪ್ಪರವರು ಚಿಕ್ಕಬೈರಪ್ಪರವರ ತಂದೆ ಎಂದರೆ ಸರಿ. ನಾರಾಯಣಪ್ಪರವರ ತಂದೆ ಹೆಸರು ನನಗೆ ಗೊತ್ತಿಲ್ಲ. ದಿ: 22.01.1963 ರಂದು ೧ನೇ ವಾದಿಯ ತಂದೆಯಾದ ನಂಜಪ್ಪರವರು ವಾದಿಯ ತಾತನಾದ ನಲ್ಲಪ್ಪರವರಿಗೆ ಖಾನೇಷುಮಾರಿ ಸಂಖ್ಯೆ 75 ವಿಸ್ತೀರ್ಣ ಪೂರ್ವ ಪಶ್ಚಿಮ 75 ಅಡಿ ಮತ್ತು ಉತ್ತರ ದಕ್ಷಿಣ 24 ಅಡಿ ವಿಸ್ತೀರ್ಣದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

6. ಸದರಿ ನಲ್ಲಪ್ಪರವರು ಖರೀದಿಸಿದ ಜಮೀನಿನ ಸ್ವಾಧೀನದಲ್ಲಿದ್ದರು ಎಂದರೆ ಸರಿ. ಸದರಿ ನಲ್ಲಪ್ಪರವರ ಮಗ ಚಿನ್ನಪ್ಪಯ್ಯ ಎಂದರೆ ಸರಿ. ಸದರಿ ನಲ್ಲಪ್ಪರವರ ನಂತರ ಚಿನ್ನಪ್ಪಯ್ಯ ಸ್ವಾಧೀನ ಹೊಂದಿದ್ದರು ಎಂದರೆ ಸರಿ. ಸದರಿ ನಲ್ಲಪ್ಪರವರು ಆಸ್ತಿಯನ್ನು ಖರೀದಿಸಿದ ನಂತರ ಪಂಚಾಯ್ತಿ ದಾಖಲೆಗಳು ಅವರ ಹೆಸರಿಗೆ ನಮೂದಾಗಿ ಅವರು ಮತ್ತು ಅವರ ವಾರಸುದಾರರು ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ನಲ್ಲಪ್ಪರವರ ಆಸ್ತಿಯಲ್ಲಿ ಯಾರು ವಾಸವಾಗಿದ್ದಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಲ್ಲಪ್ಪರವರು ವಾಸವಾಗಿರುತ್ತಾರೆ ತದನಂತರ ಖಾನೇಷುಮಾರಿ ಸಂಖ್ಯೆ 1 ರಲ್ಲಿ ಒತ್ತುವರಿ ಮಾಡಲು ಪ್ರಯತ್ನಿಸಿರುತ್ತಾರೆ ಎಂದು ನುಡಿಯುತ್ತಾರೆ.

7. ನಂಜಪ್ಪರವರು ಖಾನೇಷುಮಾರಿ ಸಂಖ್ಯೆ 75 ರಲ್ಲಿ ಗೌರಮ್ಮರವರಿಗೆ ಪೂಪ-32 ½ ಅಡಿ ಮತ್ತು ಉದ-21 ಅಡಿ ಆಸ್ತಿ ಮಾರಾಟ ಮಾಡಿದ ಕುರಿತಾದ ವಿಚಾರವನ್ನು ತಿಳಿದುಕೊಂಡಿರುತ್ತೇನೆ. ಸದರಿ ನಂಜಪ್ಪರವರು ಗೌರಮ್ಮರವರಿಗೆ ಬರೆದುಕೊಟ್ಟ ಕ್ರಯ ಪತ್ರದ ನೊಂದಣಿ ಸಮಯದಲ್ಲಿ ನಾನು ಜನಿಸಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಗೌರಮ್ಮರವರಿಗೆ ಬರೆದುಕೊಟ್ಟ ಕ್ರಯ ಪತ್ರದ ದಿನಾಂಕ ನನಗೆ ಗೊತ್ತಿಲ್ಲ. ಸದರಿ ಗೌರಮ್ಮರವರಿಗೆ ಬರೆದುಕೊಟ್ಟ ಕ್ರಯ ಪತ್ರದಲ್ಲಿ ಎಷ್ಟು ಪ್ರತಿಫಲ ಮೊತ್ತವನ್ನು ನಮೂದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಗೌರಮ್ಮರವರಿಗೆ ಬರೆದುಕೊಟ್ಟ ಕ್ರಯ ಪತ್ರದ ಚೆಕ್ಕುಬಂದಿಗಳು ತಿಳಿದಿವೆ ಮತ್ತು ಅವುಗಳು ಪೂರ್ವಕ್ಕೆ ರಾಮಸ್ವಾಮಿರವರ ಆಸ್ತಿ, ಪಶ್ಚಿಮಕ್ಕೆ ಖಾನೇಷುಮಾರಿ ೧ ಆಸ್ತಿ, ಉತ್ತರಕ್ಕೆ ನಲ್ಲಪ್ಪರವರ ಆಸ್ತಿ ಮತ್ತು ದಕ್ಷಿಣಕ್ಕೆ ಚೆನ್ನಮ್ಮರವರ ಆಸ್ತಿ ಇರುತ್ತದೆ. ಸದರಿ ಗೌರಮ್ಮರವರು ಖರೀದಿಸಿದ ಆಸ್ತಿಯ ಪೂರ್ವಕ್ಕೆ ನಂಜಪ್ಪರವರ ಉಳಿಕೆ ಆಸ್ತಿ ಎಂದರೆ ಸರಿಯಲ್ಲ. ಸದರಿ ಗೌರಮ್ಮರವರು ಖರೀದಿಸಿದ ಆಸ್ತಿಯ ಪಶ್ಚಿಮಕ್ಕೆ ಚಿಕ್ಕ ಬೈರಪ್ಪರವರ ಆಸ್ತಿ ಎಂದರೆ ಸಾಕ್ಷಿಯು ಖಾನೇಷುಮಾರಿ ಸಂಖ್ಯೆ 1 ಆಸ್ತಿ ಆದ ನಂತರ ಚಿಕ್ಕ ಬೈರಪ್ಪರವರ ಆಸ್ತಿ ಎಂದು ನುಡಿಯುತ್ತಾರೆ. ಆ ರೀತಿ ಪಶ್ಚಿಮ ದಿಕ್ಕಿಗೆ ಖಾನೇಷುಮಾರಿ ಸಂಖ್ಯೆ 1 ಆಸ್ತಿ ಆದ ನಂತರ ಚಿಕ್ಕ ಬೈರಪ್ಪರವರ ಆಸ್ತಿ ಎನ್ನುವ ವಿಚಾರವನ್ನು ಕೇಳಿ ತಿಳಿದುಕೊಂಡಿರುತ್ತೇನೆ. ನಾನು ಯಾವುದೇ ದಾಖಲೆಗಳನ್ನು ನೋಡದೆ ಮತ್ತು ಅವುಗಳನ್ನು ತಿಳಿದುಕೊಳ್ಳದೇ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗೌರಮ್ಮರವರು ಖರೀದಿಸಿದ ಆಸ್ತಿಯ ಉತ್ತರಕ್ಕೆ ಲಕ್ಷ್ಮಿ ದೇವಿರವರ ತಾತ ನಲ್ಲಪ್ಪರವರು ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ.

8. ನಾನು ನನ್ನ ಮುಖ್ಯ ವಿಚರಣೆಯ ಪ್ರಮಾಣ ಪತ್ರದ ಖಂಡಿಕೆ 2 ರಲ್ಲಿ ಕಾಣಿಸಿರುವ ಗೌರಮ್ಮರವರ ಆಸ್ತಿಯ ಪೂರ್ವದ ಕಡೆ ಇರುವ ಪೂರ್ವ ಪಶ್ಚಿಮ 37 ½ ಅಡಿ, ಮತ್ತು ಉತ್ತರ ದಕ್ಷಿಣ 24 ಅಡಿ ಜಾಗ ೧ನೇ ಪ್ರತಿವಾದಿಯ ತಾತನಾದ ನಂಜಪ್ಪರವರ ಉಳಿಕೆ ಆಸ್ತಿ ಮತ್ತು ಅವರೇ ಮಾಲೀಕರು ಆಗಿರುತ್ತಾರೆ ಎಂದರೆ ಸರಿ. ಸದರಿ ಪೂರ್ವ ದಿಕ್ಕಿನ ಆಸ್ತಿಯಲ್ಲಿ ಮನೆ ಇರುತ್ತದೆ. ಸದರಿ ಮನೆಯ ಮುಂದೆ ರಸ್ತೆ ಇರುತ್ತದೆ. ಸದರಿ ನಂಜಪ್ಪರವರ ಜಮೀನಿನ ಉತ್ತರದ ಕಡೆಗೆ ಲಕ್ಷ್ಮಿ ದೇವಮ್ಮರವರ ಅಣ್ಣನ ಆಸ್ತಿ ಇರುತ್ತದೆ. ಸದರಿ ನಂಜಪ್ಪರವರ ಹೆಸರಿಗೆ ಖಾತೆ ಆಗಿರುವ ದಾಖಲೆಯನ್ನು ನೋಡಿರುವುದಿಲ್ಲ. ಖಾನೇಷುಮಾರಿ ಸಂಖ್ಯೆ 1 ಆಸ್ತಿಯ ವಿಚಾರವನ್ನು ನಾನೇ ತಿಳಿದುಕೊಂಡಿರುತ್ತೇನೆ. ಸದರಿ ಖಾನೇಷುಮಾರಿ ೧ ಆಸ್ತಿಯ ನಿಮಗೆ ಯಾರಿಂದ ತಿಳಿದುಬಂದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಸದರಿ ಆಸ್ತಿಯಲ್ಲಿ

ಬಾಡಿಗೆಗೆ ಇದ್ದೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಬಾಡಿಗೆಗೆ ಇದ್ದೆ ಎನ್ನುವ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

9. ೧ನೇ ಪ್ರತಿವಾದಿಯು ವಾದಿ ವಿರುದ್ಧ ಹೊಸಕೋಟೆಯ ೨ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಮೂಲ ದಾವೆ ಸಂಖ್ಯೆ 59-2019 ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಖಾನೇಷುಮಾರಿ ಸಂಖ್ಯೆ 1 ಆಸ್ತಿ ಖಾಲಿ ಜಾಗವಾಗಿರುವುದಿಲ್ಲ ಮತ್ತು ಮನೆ ಇರುತ್ತದೆ. ಖಾನೇಷುಮಾರಿ ಸಂಖ್ಯೆ 1 ಕ್ಕೆ ಅಳತೆ ಇರುವುದಿಲ್ಲ. ನಾನು ಮೂಲ ದಾವೆ ಸಂಖ್ಯೆ 59-2019 ದಾವೆಯಲ್ಲಿ ೧ನೇ ಪ್ರತಿವಾದಿ ಪರವಾಗಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ಖಾನೇಷುಮಾರಿ ಸಂಖ್ಯೆ 1 ಆಸ್ತಿಯನ್ನು ನಲ್ಲಪ್ಪರವರು ಮಾರಾಟ ಮಾಡಿರುತ್ತಾರೆ. ಸದರಿ ಖಾನೇಷುಮಾರಿ ಸಂಖ್ಯೆ 1 ಆಸ್ತಿಯು ರಾಮಸ್ವಾಮಿರವರ ಆಸ್ತಿ ಆಗಿರುತ್ತದೆ.

10. ಖಾನೇಷುಮಾರಿ ಸಂಖ್ಯೆ 1 ಆಸ್ತಿಯ ಪೂರ್ವಕ್ಕೆ ಚೆನ್ನಬಸ್ಸಪ್ಪರವರ ಆಸ್ತಿ ಇರುತ್ತದೆ. ನಾನು ವಾಸವಾಗಿದ್ದ ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಚಿಕ್ಕಬೈರಪ್ಪ ಮತ್ತು ನಂಜಪ್ಪರವರಿಗೆ ಮಾರಾಟ ಮಾಡಿರುವ ನಲ್ಲಪ್ಪ ಎನ್ನುವವರು ವಾದಿಯ ತಾತ ಎಂದರೆ ಸಾಕ್ಷಿಯು ನಂಜಪ್ಪರವರಿಗೆ ಮಾರಾಟ ಮಾಡಿದ ನಲ್ಲಪ್ಪ ವಾದಿಯ ತಾತ ಎಂದು ತಿಳಿದಿದೆ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಖಾನೇಷುಮಾರಿ ಸಂಖ್ಯೆ 1 ಆಸ್ತಿಯು ಖಾಲಿ ಆಸ್ತಿ ಎಂದು ಕಾಣಿಸಿರುತ್ತೇನೆ ಎಂದರೆ ಸಾಕ್ಷಿಯು ಮನೆ ಆದ ನಂತರ ಖಾಲಿ ಆಸ್ತಿ ಇದೆ ಎಂದು ನುಡಿಯುತ್ತಾರೆ. ಸದರಿ ಖಾಲಿ ಆಸ್ತಿ ಇದೆ ಎನ್ನುವ ವಿಚಾರ ನನಗೆ ಯಾರು ಹೇಳಿರುವುದಿಲ್ಲ ಮತ್ತು ನಾನು ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಖಾನೇಷುಮಾರಿ ಸಂಖ್ಯೆ 1 ಆಸ್ತಿಯ ಮೂಲ ದಾಖಲೆಗಳನ್ನು ನೋಡಿರುವುದಿಲ್ಲ ಮತ್ತು ಆ ಕುರಿತು ತಿಳಿದುಕೊಂಡಿರುತ್ತೇನೆ. ನಾನು ಖಾನೇಷುಮಾರಿ ಸಂಖ್ಯೆ 75,1 ಮತ್ತು 64 ಆಸ್ತಿಗಳ ದಾಖಲೆಗಳನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿಯು ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

11. ವಾದಿಯು ಮನೆ ಕಟ್ಟುವಾಗ ೧ನೇ ಪ್ರತಿವಾದಿ ತೊಂದರೆ ನೀಡಿದ ಮೇರೆಗೆ ವಾದಿಯು ಪೊ.ಠಾಣೆಗೆ ದೂರು ನೀಡಿದ್ದರು ಎಂದರೆ ಸಾಕ್ಷಿಯು ಸುಳ್ಳು ದೂರು ಎಂದು ನುಡಿಯುತ್ತಾರೆ. ನಿಪಿ.7 ರಲ್ಲಿರುವ ಮನೆ ಗೌರಮ್ಮರವರ ಮನೆ ಎಂದರೆ ಸರಿ. ಸದರಿ ಗೌರಮ್ಮ ರವರ ಮನೆಯ ಮುಂದೆ ವಾದಿಯು ಮನೆ ಕಟ್ಟುತ್ತಿದ್ದಾರೆ ಎಂದರೆ ಸರಿ. ನಿಡಿ.49 ರಿಂದ 51 ಛಾಯಾಚಿತ್ರಗಳಲ್ಲಿ ಕಾಣುತ್ತಿರುವ ಮನೆಯನ್ನು ವಾದಿಯು ನಿರ್ಮಿಸಿರುತ್ತಾರೆ ಎಂದರೆ ಸಾಕ್ಷಿಯು ರಾತ್ರಿ ಸಮಯದಲ್ಲಿ ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ತನ್ನ ಆಸ್ತಿಯಲ್ಲಿ ಮನೆಯನ್ನು ನಿರ್ಮಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ನಂಜಪ್ಪರವರು ನಲ್ಲಪ್ಪರವರಿಂದ ಖರೀದಿಸಿದ ಖಾನೇಷುಮಾರಿ ಸಂಖ್ಯೆ 75 ರ ಒಟ್ಟು ವಿಸ್ತೀರ್ಣದ ಅರ್ಧ ವಿಸ್ತೀರ್ಣದ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.